ವಿಶೇಷವಾಗಿ ಅದರಲ್ಲಿರತಕ್ಕಂಥ 43 ತಾಲ್ಲೂಕುಗಳಲ್ಲಿ ಉತ್ತರ ಕರ್ನಾಟಕದಲ್ಲಿಯೇ 36 ತಾಲ್ಲೂಕುಗಳು ಇರುವುದರಿಂದ ಪತ್ರಿಕೆಯಲ್ಲಿ ಹೇಳಿಕೆ ನೀಡುವ ಮೂಲಕ ಮಾನ್ಯ ಕಂದಾಯ ಸಚಿವರು ಸ್ಪಂದಿಸಿದ್ದಾರೆ. ಬರುವ ಅಧಿವೇಶನದಲ್ಲಿ ಹೊಸ ತಾಲ್ಲೂಕುಗಳ ಘೋಷಣೆಯೊಂದಿಗೆ ಅವುಗಳಿಗೆ ಅನುದಾನದ ನಿರೀಕ್ಷೆಯಲ್ಲಿದ್ದೇವೆ. ಈ 43 ತಾಲ್ಲೂಕುಗಳನ್ನು ಘೋಷಣೆ ಮಾಡುವ ಸಂದರ್ಭದಲ್ಲಿ ನನ್ನ ಮತ ಕ್ಷೇತ್ರ ಅತಿ ಹಿಂದುಳಿದ ತಾಲ್ಲೂಕು ಆಗಿರುವುದರಿಂದ ಯರಗಟ್ಟಿಯನ್ನು ತಾಲ್ಲೂಕಾಗಿ ಘೋಷಣೆ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ದೇವರಾಜ್ ಅರಸ್ ಅಭಿವೃದ್ಧಿ ನಿಗಮ, ಅಂಬೇಡ್ಕರ್ ಅಭಿವೃದ್ಧಿ ನಿಗಮ, ವಾಲ್ಮೀಕಿ ನಿಗಮಗಳಿಗೆ ಏನು ಸ್ಥಳ ಕೊಡುವ ವಿಷಯದಲ್ಲಿ ಅಲ್ಲಿರತಕ್ಕ ಮುಖ ಬೆಲೆಗೆ ಅಲ್ಲಿರತಕ್ಕ Sub Registrar value ಯಿಂದ ನಾವು ಏನು ತೆಗೆದುಕೊಳ್ಳಬೇಕು, ಅದರಿಂದ ಶೇಕಡ 25 ರಷ್ಟು ಹಣವನ್ನು ತುಂಬಿದಾಗ ಮಾತ್ರ ಅವುಗಳಿಗೆ ಅವಕಾಶ ಮಾಡಿಕೊಡುತ್ತೇವೆ ಎನ್ನುವುದು ಸರ್ಕಾರ ಆದೇಶದಿಂದ ಕೂಡಿರುವುದರಿಂದ ಅದನ್ನು ಕೂಡ ಮಾರ್ಪಡಿಸಿ, ಅದನ್ನು ಸುಲಭವಾಗಿ ಮಾಡುವಂತೆ ಮಾಡಬೇಕು. ಮುಖ್ಯವಾಗಿ ಈ ರಸ್ತೆಗಳ ಅಭಿವೃದ್ಧಿ ಮತ್ತು ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ವಿಶೇಷವಾಗಿ ಈ 14ನೇ ವಿಧಾನಸಭೆ ಸಂಘಟನೆಗೊಂಡ ನಂತರ 2 ನೇ ಬಾರಿಗೆ ಬೆಳಗಾವಿಯಲ್ಲಿ ವಿಶೇಷವಾದ ಈ ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲಿ ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟ ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈ ಚರ್ಚೆಯನ್ನು ನಾಳೆ ಸ್ವಲ್ಪ ಹೊತ್ತಿಗೆ ಚರ್ಚೆ ಮಾಡುವುದಕ್ಕೆ ತೆಗೆದುಕೊಳ್ಳೋಣ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಕೂಡ ಒಪ್ಪಿದ್ದಾರೆ.

ಶ್ರೀ ಈಶ್ವರ್ ಖಂಡ್ರೆ : ಮಾನ್ಯ ಅಧ್ಯಕ್ಷರೆ, ಕೇವಲ ಐದು ನಿಮಿಷ ನಮಗೆ ಮಾತನಾಡಲು ಅವಕಾಶ ಕೊಡಿ.

ಶ್ರೀ ದೊಡ್ಡಮನಿ ರಾಮಕೃಷ್ಣ ಸಿದ್ಲಿಂಗಪ್ಪ : ಮಾನ್ಯ ಅಧ್ಯಕ್ಷರೆ, ಈ ಭಾಗದ ಎರಡು ಮುಖ್ಯವಾದ ವಿಷಯ ಇದೆ.

(ಗೊಂದಲ)

ಅಧ್ಯಕ್ಷರು : ಗಮನ ಸೆಳೆಯುವ ಸೂಚನೆಗಳು ಬಹಳ ಇವೆ. ನಿಮಗೆ ನಾಳೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಈಗ ಗಮನ ಸೆಳೆಯುವ ಸೂಚನೆಗಳು.

9. ಗಮನ ಸೆಳೆಯುವ ಸೂಚನೆಗಳು

ವಿಷಯ : ಮೂಡಿಗೆರೆ ವಿಧಾನಸಭಾ ಕ್ಷೇತ್ರದ ಕಳಸ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರನ್ನು ಒದಗಿಸಲು NRDWP ಯೋಜನೆಯಡಿ ಕೈಗೊಂಡಿರುವ ಕಾಮಗಾರಿಯನ್ನು ಪೂರ್ಣಗೊಳಿಸುವ ಬಗ್ಗೆ.

ಶ್ರೀ ಬಿ.ಬಿ. ನಿಂಗಯ್ಯ (ಮೂಡಿಗೆರೆ) : ಸನ್ಮಾನ್ಯ ಅಧ್ಯಕ್ಷರೆ, ಮೂಡಿಗೆರೆ ವಿಧಾನಸಭಾ ಕ್ಷೇತ್ರದ ಕಳಸ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರನ್ನು ಒದಗಿಸಲು NRDWP (Natioanl Rural Drinking Water Programme) ಯೋಜನೆಯಡಿಯಲ್ಲಿ ಕಾಮಗಾರಿ ಪೂರ್ಣಗೊಳ್ಳದಿರುವ ಬಗ್ಗೆ ಸರ್ಕಾರ ಈವರೆಗೆ ಏನು ಕ್ರಮ ಕೈಗೊಂಡಿದೆ ಎನ್ನುವುದರ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಅಧ್ಯಕ್ಷರು: ಉತ್ತರ ಹೇಳಲು ಸಚಿವರು ಇದ್ದಾರೆಯೇ ? Parliamentary Affairs Minister ಎಲ್ಲಿದ್ದಾರೆ? ಅಲ್ಲಿ ಏನು ನೋಡುತ್ತಿದ್ದೀರಿ ?

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಅಧ್ಯಕ್ಷರೆ, RDPR Minister ರವರಿಂದ ನಾಳೆ ಉತ್ತರ ಕೊಡಿಸುತ್ತೇನೆಂದು ತಾವು ಹೇಳಿದ್ದೀರಿ, ಮಾನ್ಯ ಸಚಿವರು ಆಗಲೇ ಇದ್ದರು. ದಯಮಾಡಿ ಅವರನ್ನು ಕರೆಸಬೇಕು. ಕಾಮಗಾರಿ ಅಪೂರ್ಣಗೊಂಡು ಸುಮಾರು 5 ವರ್ಷಗಳಾಗಿದೇ, ಆ ಭಾಗದ ಜನರ ಬಹಳ ದಿನಗಳ ಆಸೆ, ಬೇಡಿಕೆಯನ್ನು ನಾವು ಪೂರ್ಣಗೊಳಿಸುವುದಕ್ಕೆ ಆಗಲಿಲ್ಲ. ಸರ್ಕಾರ ಈಗಲಾದರೂ ಕ್ರಮ ಕೈಗೊಳ್ಳುತ್ತದೆಯೇ ?

ಅಧ್ಯಕ್ಷರು : ಉತ್ತರ ಹೇಳಲು ಏನಾದರೂ ಇದೆಯೇ ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸಭಾಧ್ಯಕ್ಷರೆ, ಉತ್ತರ ಕೊಡುವವರು ಯಾರೂ ಇಲ್ಲ, responce ಕೊಡುವವರು ಯಾರೂ ಇಲ್ಲ. ಸರ್ಕಾರ, ಮಂತ್ರಿಗಳು ಏನು ಮಾಡುತ್ತಿದ್ದಾರೆನ್ನುವುದು ಗೊತ್ತಾಗುತ್ತಿಲ್ಲ. Calling attention ನಡೆಯುತ್ತಿದೆ. ಗಮನ ಸೆಳೆಯುವ ಸೂಚನೆಗೆ ಉತ್ತರ ಕೊಡುವವರು ಯಾರೂ ಇಲ್ಲ. ಬೇರೆ ಸಚಿವರಾದರೂ ಹೇಳಬೇಕಲ್ಲವೆ ?

ಅಧ್ಯಕ್ಷರು : ಸ್ವಲ್ಪ ಇರಿ, ಸಚಿವರು ಬರುತ್ತಾರೇನೋ ನೋಡೋಣ.

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಅಧ್ಯಕ್ಷರೆ, RDPR Minister ನ್ನು ದಯಮಾಡಿ ಕರೆಸಿ.

ಅಧ್ಯಕ್ಷರು : ಆಯಿತು, ಶ್ರೀ ಹೆಚ್.ಡಿ. ರೇವಣ್ಣನವರು.

ವಿಷಯ : ಹಾಸನ ಜಿಲ್ಲೆಯ ಚನ್ನರಾಯಪಟ್ಟಣದ ಕಾಚೇನಹಳ್ಳಿ ಏತ ನೀರಾವರಿ ಯೋಜನೆಯು ಕುಂಠಿತಗೊಂಡಿರುವ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆಯ ಚನ್ನರಾಯಪಟ್ಟಣದ ಕಾಚೇನಹಳ್ಳಿ ಏತ ನೀರಾವರಿ ಯೋಜನೆಯು ಕುಂಠಿತಗೊಂಡಿರುವ ಬಗ್ಗೆ ಮಾನ್ಯ ನೀರಾವರಿ ಸಚಿವರ ಗಮನ ಸೆಳೆಯುತ್ತಿದ್ದೇನೆ. ಒಂದು ಏತ ನೀರಾವರಿ ಪ್ರಾರಂಭವಾಗಿ 23 ವರ್ಷಗಳಾಗಿದೆ. 23 ವರ್ಷಗಳಾದರೂ ಪೂರ್ಣಗೊಂಡಿಲ್ಲ.